**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಶಶೀಲ್ ಜಿ. ನಮೋಶಿ, ಇವರ ಶೂನ್ಯ ವೇಳೆಯ ಪ್ರಸ್ತಾಪಕ್ಕೆ ಮಾನ್ಯ ಇಲಾಖಾ ಸಚಿವರ ಉತ್ತರ:**

**ಸೂಚನೆ:-**

ಕಲ್ಯಾಣ ಕರ್ನಾಟಕ ಭಾಗದ ಪ್ರಮುಖ ನಗರವಾದ ಕಲಬುರ್ಗಿ ಜಿಲ್ಲೆಯ ಜನತೆಯ ದಶಕಗಳ ಕನಸಾಗಿದ್ದ ವಿಮಾನ ನಿಲ್ದಾಣ ಸ್ಥಾಪನೆಯು ಸುಮಾರು 175 ಕೋಟಿ ರೂಪಾಯಿ ವೆಚ್ಚದಲ್ಲಿ 2008 ಜೂನ್ 18ರಂದು ಅಡಿಗಲ್ಲು ಹಾಕಿ 2019 ನವೆಂಬರ್ 22 ರಂದು ಉದ್ಘಾಟನೆ ಆಯಿತು. ಆರಂಭದಲ್ಲಿ ಜಿಲ್ಲೆಯ ಜನತೆಗೆ ಒಂದು ಉತ್ತಮ ವಿಮಾನ ಸೇವೆಯನ್ನು ದೊರಕಿಸಿ ಕೊಡುವುದರಲ್ಲಿ ಸಹಕಾರಿಯಾಗಿತ್ತು. ಆದರೆ ಕಾಲಕ್ರಮೇಣವಾಗಿ ಜನತೆ ಇಟ್ಟುಕೊಂಡಿದ್ದ ಹತ್ತಾರು ನಿರೀಕ್ಷೆಗಳನ್ನು ವಿಮಾನ ನಿಲ್ದಾಣ ಆರಂಭವಾದ ಕೇವಲ 6 ವರ್ಷಗಳಲ್ಲಿ ನಿರಾಸೆಯ ಕಾರ್ಮೋಡ ಕವಿದಂತಾಗಿದೆ. ಪ್ರಾರಂಭದಲ್ಲಿ ಬೆಂಗಳೂರು ಹಾಗೂ ತಿರುಪತಿಗೆ ವಿಮಾನ ಸೇವೆಯನ್ನು ನೀಡುತ್ತಿದ್ದ ಸ್ಟಾರ್ ಏರ್ ಹಾಗೂ ಏರ್ ಇಂಡಿಯಾ ವಿಮಾನ ಕಂಪನಿಗಳು ಕಾಲ ಕ್ರಮೇಣವಾಗಿ ಸೇವೆಯನ್ನು ಕುಂಠಿತಗೊಳಿಸುತ್ತಾ ಬಂದವು.

ಪ್ರಾರಂಭದಲ್ಲಿ 2022-23ನೇ ಸಾಲಿನಲ್ಲಿ 1,994 ವಿಮಾನಗಳು ಹಾರಾಟವಾಗಿದ್ದು ಆ ವರ್ಷ 79,143 ಜನರು ಪ್ರಯಾಣ ಮಾಡಿದ್ದರು. 2023-24ರಲ್ಲಿ 1,641 ವಿಮಾನ ಹಾರಾಟ ನಡೆಸಿದ್ದು ಆಗ 54,862 ಪ್ರಯಾಣ ಮಾಡಿದ್ದರು. ತದನಂತರ 2024-25 ರಲ್ಲಿ 851 ವಿಮಾನ ಹಾರಾಟವಾಗಿ 30,924 ಪ್ರಯಾಣಿಕರು ಪ್ರಯಾಣಿಸಿದ್ದು ಪ್ರಸ್ತುತ 2025-26 ನೇ ಸಾಲಿನಲ್ಲಿ ಎಪ್ರೀಲ್ ನಿಂದ ಜೂನ್ ವರೆಗೆ ಕೇವಲ 206 ವಿಮಾನಗಳು ಹಾರಾಟವಾಗಿ 7,115 ಪ್ರಯಾಣಿಕರು ಮಾತ್ರ ಪ್ರಯಾಣ ಮಾಡಿರುತ್ತಾರೆ. ಇದರಿಂದಾಗಿ ಹಲವು ವರ್ಷಗಳ ಹಿಂದೆಯೇ ಏರ್ ಇಂಡಿಯಾ ಕಂಪನಿಯು ಸೇವೆ ಸ್ಥಗಿತಗೊಳಿಸಿತ್ತು.

ಪ್ರಸ್ತುತ ಕಳೆದ ಅಕ್ಟೋಬರ್ ತಿಂಗಳಲ್ಲಿ ಸ್ಟಾರ್ ಏರ್ ಕಂಪನಿಯ ನಿರ್ದೇಶಕರಾದ ಜ್ಞಾನೇಶ್ ರವರು ತಮ್ಮ ಕಂಪನಿಯ ಸೇವೆಯು ಅಕ್ಟೋಬರ್ 15ರಿಂದ ಸ್ಥಗಿತಗೊಳಿಸಲಿದೆ ಎಂದು ಹೇಳಿದ್ದರು ಆದರೆ ಅಕ್ಟೋಬರ್ 8ರ ದಿನದಂದೆಯೇ ಕಂಪನಿ ಸೇವೆಯನ್ನು ಸ್ಥಗಿತಗೊಳಿಸಿದೆ. ಇದರಿಂದಾಗಿ ಕಲಬುರ್ಗಿ ಜಿಲ್ಲೆಯಿಂದ ಬೆಂಗಳೂರಿಗೆ ಇದ್ದ ಏಕಮಾತ್ರ ವಿಮಾನ ಸೇವೆಯು ಸಂಪೂರ್ಣವಾಗಿ ಸ್ಥಗಿತವಾಗಿರುವುದು ಅತ್ಯಂತ ವಿಷಾಧನೀಯ ಸಂಗತಿಯಾಗಿದೆ. ಇದರ ಮಧ್ಯೆ ಉಡಾನ್ ಯೋಜನೆ ಅಡಿಯಲ್ಲಿ ಸ್ಟಾರ್ ಏರ್ ಸಂಸ್ಥೆಯು ಬೀದರ್, ಶಿವಮೊಗ್ಗ ಹಾಗೂ ನಾಂದೇಡ್ ನಗರಗಳಿಗೆ ಹೊಸ ಮಾರ್ಗ ಮಂಜೂರಾಗಿದ್ದು ಈ ಹಿಂದೆ ಕಲಬುರ್ಗಿಗೆ ಬಳಕೆಯಾಗುತ್ತಿದ್ದ ಆ ಸಂಸ್ಥೆಯ ವಿಮಾನವನ್ನು ನಾಂದೇಡ್ ಮಾರ್ಗಕ್ಕೆ ಬಳಕೆ ಮಾಡಲು ಚಿಂತನೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ಈ ಎಲ್ಲಾ ಬೆಳವಣಿಗೆಗಳಿಂದಾಗಿ ಕಲಬುರ್ಗಿ ಜನತೆಯು ವಿಮಾನಸೇವೆಯಿಂದ ವಂಚಿತರಾಗಿರುವುದು. ಮಾತ್ರವಲ್ಲದೆ 175 ಕೋಟಿ ವೆಚ್ಚ ಮಾಡಿದ ಈ ಕಾಮಗಾರಿ ಯೋಜನೆಯು ನಿಷ್ಪ್ರಯೋಜಕವಾಗಿದೆ. ಆದ್ದರಿಂದ ಸರ್ಕಾರವು ಈ ಬಗ್ಗೆ ಗಮನಹರಿಸಿ ವಿವಿಧ ಕಂಪನಿಗಳಿಗೆ ವಿಮಾನಸೇವೆಯನ್ನು ಒದಗಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿ ನಮ್ಮ ಭಾಗದ ಜನತೆಗೆ ಪುನಃ ವಿಮಾನಯಾನ ಸೇವೆಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವಂತೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರಿಗೆ ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಉತ್ತರ:**

ಕಲಬುರಗಿ ವಿಮಾನ ನಿಲ್ದಾಣವನ್ನು ಸುಮಾರು 742 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ರೂ.175.57 ಕೋಟಿಗಳ ವೆಚ್ಚದಲ್ಲಿ ರಾಜ್ಯ ಸರ್ಕಾರವು ಅಭಿವೃದ್ಧಿಪಡಿಸಿ, ದಿನಾಂಕ:24.08.2019ರಂದು ಮಾಡಿಕೊಂಡಿರುವ ಒಪ್ಪಂದದಂತೆ ವಿಮಾನ ನಿಲ್ದಾಣದ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು

...2

ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ (AAI) ಹಸ್ತಾಂತರಿಸಿದೆ. ಈ ವಿಮಾನ ನಿಲ್ದಾಣವು ದಿನಾಂಕ:22.11.2019 ರಿಂದ ಕಾರ್ಯಾಚರಣೆಗೊಂಡಿರುತ್ತದೆ.

ರಾಜ್ಯ ಸರ್ಕಾರವು ಸಾರ್ವಜನಿಕ ವಿಮಾನಯಾನ ಸಂಪರ್ಕ ಕಲ್ಪಿಸಲು ಯಾವುದೇ ವಿಮಾನಯಾನ ನಿರ್ವಾಹಕ ಸಂಸ್ಥೆಯೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಿರುವುದಿಲ್ಲ.

ಕಲಬುರಗಿ ವಿಮಾನ ನಿಲ್ದಾಣವು ಕೇಂದ್ರ ಸರ್ಕಾರದ ಪ್ರಾದೇಶಿಕ ಸಂಪರ್ಕ ಯೋಜನೆಯ 3ನೇ ಸುತ್ತಿನ ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಆಯ್ಕೆಯಾಗಿರುತ್ತದೆ. ಅದರಂತೆ, ವಿಮಾನಯಾನ ಕಾರ್ಯನಿರ್ವಾಹಕ ಸಂಸ್ಥೆಗಳು ಕೇಂದ್ರ ಸರ್ಕಾರದ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (AAI) ಸಂಸ್ಥೆಯೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಿರುತ್ತವೆ. ಈ ಒಪ್ಪಂದದಂತೆ ಕನಿಷ್ಠ 3 ವರ್ಷಗಳ ಕಾಲ ವಿಮಾನಯಾನ ಸೇವೆಯನ್ನು ಒದಗಿಸಬೇಕಾಗಿರುತ್ತದೆ. ಈ ಸಂಬಂಧ 3ನೇ ಸುತ್ತಿನ ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಸಂಸ್ಥೆಗಳ ವಿವರಗಳನ್ನು ಕೆಳಕಂಡ ತಃಖ್ತೆಯಲ್ಲಿ ವಿವರಿಸಿದೆ;

| ಕ್ರ ಸಂ | RCS ಮಾರ್ಗ | ವಿಮಾನಯಾನ ನಿರ್ವಾಹಕಸಂಸ್ಥೆಗಳು |
|---|---|---|
| 1 | Bangalore - Kalaburgi - Bangalore | Ghodawat |
| 2 | Bangalore - Kalaburgi - Bangalore | Alliance Air |
| 3 | Hindan - Kalaburgi - Hindan | Ghodawat |
| 4 | Tirupati -Kalaburgi - Tirupati | Ghodawat |

ಕೇಂದ್ರ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಪ್ಪಂದದಂತೆ ವಿಮಾನಯಾನ ನಿರ್ವಾಹಕ ಸಂಸ್ಥೆಗಳು ವಿಮಾನ ಸೇವೆಯನ್ನು ಒದಗಿಸಿರುತ್ತವೆ. ಮೇಲಿನ ಕೋಷ್ಠಕದಲ್ಲಿ ತಿಳಿಸಿರುವಂತೆ ಉಡಾನ್ ಯೋಜನೆಯಡಿ ಹಣಕಾಸು ಬೆಂಬಲದೊಂದಿಗೆ 03 ವರ್ಷ ಅವಧಿಯ ಹಾರಾಟ ನಡೆಸಿದ ನಂತರ ಸ್ವ-ಸಾಮರ್ಥ್ಯದ ಮೇಲೆ ಹಾರಾಟವನ್ನು ಬೆಂಗಳೂರು-ಕಲಬುರಗಿ-ಬೆಂಗಳೂರು ಮಾರ್ಗದಲ್ಲಿ ಮಾತ್ರ ಮುಂದುವರೆದಿರುತ್ತದೆ. ಉಳಿದಂತೆ, ಕ್ರಮ ಸಂಖ್ಯೆ 2, 3 ಮತ್ತು 4 ರಲ್ಲಿ ತಿಳಿಸಿರುವ ಮಾರ್ಗಗಳಲ್ಲಿ ಉಡಾನ್ ಯೋಜನೆಯಡಿ 03 ವರ್ಷ ಹಾರಾಟ ಮುಗಿಸಿದ ನಂತರ ಸಂಬಂಧಪಟ್ಟ ಸಂಸ್ಥೆಗಳು ಆಯಾ ಮಾರ್ಗಗಳಲ್ಲಿ ಬೇಡಿಕೆಯಿಲ್ಲವೆಂದು ಸ್ವ-ಸಾಮರ್ಥ್ಯದಲ್ಲಿ ವಿಮಾನ ಹಾರಾಟ ಮುಂದುವರೆಸಿರುವುದಿಲ್ಲ.

ವಿಮಾನಯಾನ ಸೇವೆ ಪ್ರಾರಂಭವಾದ ದಿನದಿಂದ ಇಲ್ಲಿವರೆಗೆ ಪ್ರಯಾಣಿಸಿರುವ ಪ್ರಯಾಣಿಕರ ವರ್ಷವಾರು ವಿವರಗಳನ್ನು ಕೆಳಕಂಡ ತಃಖ್ತೆಯಲ್ಲಿ ವಿವರಿಸಿದೆ;

| ಕ್ರ ಸಂ | ಆರ್ಥಿಕ ವರ್ಷ | ಪ್ರಯಾಣಿಕರ ಸಂಖ್ಯೆ |
|---|---|---|
| 1. | 2019-20 | 10,498 |
| 2. | 2020-21 | 54,960 |
| 3. | 2021-22 | 93,683 |
| 4. | 2022-23 | 87,898 |
| 5. | 2023-24 | 53,829 |
| 6. | 2024-25 | 41,586 |
| 7. | 2025-26 | 14,252 |

ಬೆಂಗಳೂರು-ಕಲಬುರಗಿ ಮಾರ್ಗದಲ್ಲಿ ಸೇವೆಯನ್ನು ಒದಗಿಸುತ್ತಿದ್ದ ಮೆ: Ghodawat ಸಂಸ್ಥೆಯು ಈ ಮಾರ್ಗದಲ್ಲಿ ಪ್ರಯಾಣಿಸುವ ಪ್ರಯಾಣಿಕರ ಬೇಡಿಕೆಯ ಕುಸಿತದಿಂದ ಹಾಗೂ ವಾಣಿಜ್ಯಕಾರ್ಯಸಾಧ್ಯತೆಯಿಲ್ಲದ ಕಾರಣ, ದಿನಾಂಕ:15.10.2025ರಿಂದ ವಿಮಾನಯಾನ ಸೇವೆಯನ್ನು ಸ್ಥಗಿತಗೊಳಿಸಿದೆ.

ಬೆಂಗಳೂರು-ಕಲಬುರಗಿ ಮಾರ್ಗದಲ್ಲಿ ಪ್ರಸ್ತುತ ಕಾರ್ಯಾಚರಣೆ ಮಾಡುತ್ತಿರುವ ಸಂಸ್ಥೆಯ ವಿಮಾನಯಾನ ಸೇವೆಯನ್ನು ಮುಂದುವರೆಸಲು / ಪ್ರಾದೇಶಿಕ ಸಂಪರ್ಕ ಯೋಜನೆಯ ಅಡಿಯಲ್ಲಿ ಇತರ ಅರ್ಹ ನಿರ್ವಾಹಕರಿಂದ ಹೊಸದಾಗಿ ಬಿಡ್‌ಗಳನ್ನು ಆಹ್ವಾನಿಸುವಂತೆ ಕೇಂದ್ರ ಸರ್ಕಾರವನ್ನು ದಿನಾಂಕ:26.10.2025ರಂದು ಕೋರಲಾಗಿದೆ.

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

**ಸಂಖ್ಯೆ:** ಐಡಿಡಿ 231 ರಾಅವಿ 2023